ಶ್ರೀ ಎಂ. ನಾಗಪ್ಪ.—ಶ್ರೀಶೈಲದ ಹತ್ತಿರ ಚೌಲ್ಟ್ರಿ ಕಟ್ಟಿಸಬೇಕೆಂದು ಹೋದ ವರ್ಷ ಮಾನ್ಯ ಮುಖ್ಯ ಮಂತ್ರಿಯವರು ಘೋಂಡೇಶನ್ ಹಾಕಿದ್ದರು. ಇದುವರೆಗೂ ಯಾವ ಕಾರ್ಯಕ್ರಮವೂ ಆಗಿಲ್ಲ. ಆದ್ದರಿಂದ ಅದು ಯಾವ ಹಂತದಲ್ಲಿದೆ? ಮತ್ತು ಇಲ್ಲಿಗೆ ಉತ್ತರ ಭಾಗದ ಜನರು ಮತ್ತು ಶೋರಾಪುರದ ಅನೇಕ ಜನರು ದರ್ಶನ ಕೊಡುವುದರಿಂದ, ಜಾಗ್ರತೆಯಾಗಿ ಇದನ್ನು ಕಟ್ಟಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳಿದಂತೆ, ನಮ್ಮ ಮೈಸೂರು ಪ್ರಾಂತ್ಯದ ಜನರಿಗೆ ಮತ್ತು ಶೋರಾಪುರದ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಕಟ್ಟಲು ನಿರ್ಣಯ ತೆಗೆದುಕೊಂಡದ್ದು. ಆ ಕೆಲಸ ಬೇಗನೇ ಶುರು ಆಗುತ್ತದೆಂದು ತಿಳಿದುಬಂದಿದೆ.

ಶ್ರೀ ಶಿದ್ದಯ್ಯ ಕಾಶೀಮಠ.—ಹೊಸ ಚೌಲ್ಟ್ರಿಗಳನ್ನು ಕೇವಲ ವಾರಣಾಸಿ ಮುಂತಾದ ಕಡೆ ಗಳಲ್ಲಿ ಕಟ್ಟುವುದಲ್ಲದೆ, ನಮ್ಮ ರಾಜ್ಯದ ಸೌಂದತ್ತಿ, ದೇವರಗುಡಿ ಮುಂತಾದ ಕಡೆಗಳಲ್ಲಿ ಛತ್ರ ಗಳನ್ನು ಕಟ್ಟಲು ಸರ್ಕಾರ ಮನಸ್ಸು ಮಾಡಿದ್ದಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರ ದುಡ್ಡು ಖರ್ಚು ಮಾಡುವ ಮೊದಲು ಅಲ್ಲಿ ಆದಾಯ ಎಷ್ಟು ಬರುತ್ತದೆ, ಅದರಿಂದ ಎಷ್ಟು ಜನರಿಗೆ ಉಪಯೋಗವಾಗುತ್ತದೆ ಎಂಬುದನ್ನು ನೋಡ ಬೇಕಾಗುತ್ತದೆ. ತಾವು ಹೇಳಿದಂತೆ ಸರ್ಕಾರದ ದುಡ್ಡನ್ನು ಖರ್ಚು ಮಾಡತಕ್ಕಂಥದ್ದು ಸದ್ಯಕ್ಕೆ ಮುಂದಕ್ಕೆ ಹಾಕಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಛತ್ರಗಳನ್ನು ಕಟ್ಟುವುದು ಸ್ವಲ್ಪ ನಿಧಾನ ಮಾಡಿ ಕಾವೇರಿ ಕಣಿವೆಯಲ್ಲಿ ನೀರು ಒದಗಿಸತಕ್ಕ ಕಡೆ ಸರ್ಕಾರ ಗಮನ ಕೊಡಬೇಕಾಗಿರುವುದರಿಂದ, ಮುಖ್ಯ ಮಂತ್ರಿಯವರು ಇತ್ತ ಕಡೆ ಹೆಚ್ಚು ಗಮನ ಕೊಟ್ಟು ಛತ್ರಗಳನ್ನು ಕಟ್ಟಿಸುವುದನ್ನು ನಿಲ್ಲಿ ಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗ ಯಾವುದೂ ಹೊಸದು ತೆಗೆದುಕೊಂಡಿಲ್ಲ. ಶ್ರೀಶೈಲ ಮಾತ್ರ ತೆಗೆದುಕೊಂಡಿದ್ದೇವೆ. ಬಾಕಿ ಎಲ್ಲಾ ಮುಂದಕ್ಕೆ ಹಾಕಿದ್ದೇವೆ. ಎಲ್ಲೆಲ್ಲಿ ಖರ್ಚು ಮಾಡು ತ್ತೇವೆ, ಅಲ್ಲಿ ಎಷ್ಟು ಆದಾಯ ಬರುತ್ತದೆಂಬುದನ್ನೂ ನೋಡಿಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ವಾರಣಾಸಿಯಲ್ಲಿ ಒಂದು ಛತ್ರ ಇದೆ. ಅಲ್ಲಿ ಇರತಕ್ಕ ಕೋಣೆಗಳು ಕಡಿಮೆ ಮತ್ತು ಸೌಕರ್ಯವೂ ಇಲ್ಲ. ಆದ್ದರಿಂದ ಅಲ್ಲಿ ಹೆಚ್ಚಿನ ಕೋಣೆಗಳನ್ನು ಒದಗಿಸಿ ಹೆಚ್ಚು ಸೌಕರ್ಯವನ್ನು ಒದಗಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ನಮ್ಮ ಜನ ಹೋಗುವಂಥವರು ಬಹಳ ಕಡಿಮೆ. ಮತ್ತು ಅಲ್ಲಿ ಈಗ ಒಂದು ಕರ್ಣಾಟಕ ಹೌಸ್ ಎಂದು ಕಟ್ಟಿದ್ದಾರೆ. ಅಲ್ಲಿ ತಕ್ಕ ಸೌಕರ್ಯ ಇದೆ. ಇದರಿಂದ ಬೇರೆ ಕಟ್ಟುವ ಅವಶ್ಯಕತೆ ಇಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೇವಲ ಉತ್ಪಾದನಾ ಬಾಬುಗಳಿಗೆ ಹಣ ಹಾಕಲು ಸರ್ಕಾರ ನಿಲುವು ತೆಗೆದುಕೊಂಡಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ದೇವಸ್ಥಾನದಿಂದ ಬಂದಂತಹ ದುಡ್ಡು ಮತ್ತು ಪಬ್ಲಿಕ್ ಕಂಟ್ರಿಬ್ಯೂಷನ್—ಇದರಿಂದ ನಾವು ಛತ್ರಗಳನ್ನು ಕಟ್ಟಿಸುತ್ತಿದ್ದೇವೆ ; ಅಷ್ಟೆ.

Land acquired at Bookinakere

65. Sri M. K. BOMME GOWDA (K.R. Pet).—

Will the Minister for Revenue be pleased to state :—

(*a*) whether the land acquired at Bookinakere, Krishnarajpet taluka, for allotment to the people of submerged areas under K.R. Sagar Project, has been allotted to them ;

(*b*) if not, the reasons for the delay ;

(SRI M. K. BOMME GOWDA)

(*c*) whether there is any proposal to hand over the land acquired to the Bookinakere Village Panchayat which is repeatedly demanding the same?

SRI H. V. KOUJALGI (Minister for Revenue).—

(*a*) Yes; except an area of 7 acres 18 guntas.

(*b*) An extent of 7 acres 18 guntas of land has remained unallotted since no more displaced ryots have come forward for allotment of land to build houses.

(*c*) The request of the Panchayat is under examination.

ಶ್ರೀ ಎಂ. ಕೆ. ಬೊಮ್ಮೇಗೌಡ.— ಈ ಜಮೀನು ಯಾವಾಗ ಅಕ್ವೈಯರ್ ಆದುದು, ಅರ್ಜಿ ಬಂದುದು ಯಾವಾಗ ಎಂದು ಹೇಳುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಇದು ಕೃಷ್ಣರಾಜಸಾಗರ ಯೋಜನೆಯ ಮೇರೆಗೆ ಮುಳುಗಡೆಯಾದ ಪ್ರದೇಶದ ಜನರಿಗೆ ಜೀಕಾಗಿ ಅಕ್ವೈಯರ್ ಮಾಡಿದ್ದು. ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳಿಂದ 1918-20 ರ ಕಾಲಕ್ಕೆ ತೆಗೆದುಕೊಂಡದ್ದು ಎಂದು ತಿಳಿದುಬಂದಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—18-20 ವರ್ಷಗಳಿಂದಲೂ ಆ ಜಮೀನಿನಲ್ಲಿ ಯಾವ ಕೆಲಸ ಕಾರ್ಯವೂ ನಡೆಯದೆ, ಇದುವರೆಗೂ ವೇಕೆಂಟ್ ಆಗಿ ಬಿಟ್ಟಿರುವುದಕ್ಕೆ ಕಾರಣವೇನು? ಮನೆ ಕಟ್ಟುವುದಕ್ಕೆ ಗ್ರಾಮ ಪಂಚಾಯಿತಿಯವರು ಅಗಾಗ್ಗೆ ಕೇಳಿದರೂ ಉದಾಸೀನ ಮಾಡಲು ಕಾರಣವೇನು?

ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿ ಯಾವುದೇ ತರದ ಉದಾಸೀನವಾಗಿಲ್ಲ. 1918-20ನೇ ಇಸವಿಯ ಕಾಲಕ್ಕೆ ಮನೆಗಳನ್ನು ಕಟ್ಟುವುದಕ್ಕೆ ಯಾವ ಕೊರತೆಯೂ ಇರಲಿಲ್ಲ. ಆಗಿನ ಸರ್ಕಾರದವರು ಬೇಕಾದಷ್ಟು ಕೊಡುತ್ತಿದ್ದರು, ಪಂಚಾಯಿತಿಯವರೂ ಇಲ್ಲ ಕೊಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ.—7 ಎಕರೆ 18 ಗುಂಟೆ ಪ್ರದೇಶದ ಜಮೀನನ್ನು ಯಾರಿಗಾದರೂ ದರಖಾಸ್ತು ಕೊಡುವ ಬಗ್ಗೆ ಸರ್ಕಾರದವರು ಯೋಚನೆಮಾಡಿದ್ದಾರೆಯೇ?

ಶ್ರೀ ಎಚ್. ವಿ. ಕೌಜಲಗಿ.— ಅದನ್ನು ಪಿ. ಡಬ್ಲ್ಯು. ಡಿ. ಯವರು ಅಕ್ವೈರು ಮಾಡಿದ್ದು ಯಾರಿಗೂ ಕೊಡುವಂತೆ ವಿಚಾರ ಬಂದಿಲ್ಲ. ಅಂತಹ ಪ್ರಶ್ನೆ ಇಲ್ಲ. ಪಂಚಾಯಿತಿಯವರು ಮಾತ್ರ ಮನೆ ಕಟ್ಟಿಕೊಳ್ಳುವುದಕ್ಕೆ ಅರ್ಜಿ ಕೊಟ್ಟಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ವಿಚಾರವಾಗಿ ಪದೇ ಪದೇ ಪಂಚಾಯಿತಿಯವರು ತಮ್ಮ ಊರಿನ ಬಡಾವಣೆಗೋಸ್ಕರ ಅದು ಬಹಳ ಅಗತ್ಯವಿದೆ, ಮನೆ ಕಟ್ಟಿಕೊಳ್ಳುವುದಕ್ಕೆ ಜಾಗವಿಲ್ಲವೆಂದು ಸರ್ಕಾರಕ್ಕೆ ಎಷ್ಟೋ ಅರ್ಜಿಗಳನ್ನು ಇದುವರೆಗೆ ಗುಜರಾಯಿಸಿದ್ದರೂ ಸರ್ಕಾರ ಅದರ ಬಗ್ಗೆ ಸರ್ಕಾರ ಗಮನ ತೆಗೆದುಕೊಳ್ಳುತ್ತಾ ಇಲ್ಲವೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ವಿ. ಕೌಜಲಗಿ.— ಹಾಗೆ ಇಲ್ಲ. ಆ ಜಾಗವನ್ನು ಪಿ. ಡಬ್ಲ್ಯು.ಡಿ. ಒಂದು ನಿರ್ದಿಷ್ಟ ಉದ್ದೇಶದಿಂದ ಅಕ್ವೈರು ಮಾಡಿದೆ. ಆ ಉದ್ದೇಶ ಬಿಟ್ಟು ಅವರಿಗೆ ಅದನ್ನು ಕೊಡುವ ಬಗ್ಗೆ ಕರೆಸ್ಪಾಂಡೆನ್ಸ್ ನಡೆದಿದೆ. ಆ ರೀತಿಯಾಗಿ ಕೊಡಬೇಕೆಂದು ಸರ್ಕಾರದ ಉದ್ದೇಶವೂ ಇದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.— ಅದನ್ನು ಪಿ. ಡಬ್ಲ್ಯು.ಡಿ. ಯವರು ರೆವಿನ್ಯೂ ಇಲಾಖೆಗೆ ಕೊಟ್ಟರೂ ಅವರು ತಾತ್ಸಾರ ಮನೋಭಾವನೆಯನ್ನು ಹೊಂದಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ವಿ. ಕೌಜಲಗಿ.—ನಮ್ಮಲ್ಲಿರತಕ್ಕ ಕಾಗದ ಪತ್ರಗಳ ಪ್ರಕಾರ ಅದಿನ್ನೂ ರೆವಿನ್ಯೂ ಇಲಾಖೆಗೆ ಬಂದಿಲ್ಲ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿಯೇ ಇದೆ.